ಕ್ರಮ ಸಂಖ್ಯೆ	ಬ್ಯಾರೇಜಿನ ಹೆಸರು	ಅಂದಾಜು ಮೊತ್ತ ಲಕ್ಷಗಳಲ್ಲಿ	ನೀರಿನ ಬಳಕೆ ಟಿಎಂಸಿಯಲ್ಲಿ	ಅಚ್ಚುಕಟ್ಟು ಹೆಕ್ಟೇರುಗಳಲ್ಲಿ
1	2	3	4	5
1	ಜಿರಗಿಹಾಳ್	641	0.78	1.980
2	ಮಾಣಿಕೇಶ್ವರ್	516	0.78	1.980
3	ಹಾಲಹಳ್ಳಿ	520	2.46	6.732
4	ಚಂದಾಪುರ	499	0.78	1.980
	ಒಟ್ಟು	2176	4.80	12.672

ಮೇಲಿನ ನಾಲ್ಕು ಬ್ಯಾರೇಜುಗಳಿಗೆ ದಿ: 01.10.2001ರಂದು ಜರುಗಿದ ಬೃಹತ್ ನೀರಾವರಿ ಯೋಜನಾ ಸಲಹಾ ಸಮಿತಿಯು ಅನುಮೋದಿಸಿದೆ. ಈ ಬ್ಯಾರೇಜುಗಳ ನಿರ್ಮಾಣದ ಸಲುವಾಗಿ ಸರ್ವೆ ಕೆಲಸವು ಪ್ರಗತಿಯಲ್ಲಿದ್ದು, ಅನುದಾನವನ್ನು ಒದಗಿಸಲಾಗಿದೆ.

ಮಲಪ್ರಭ ಬಲದಂಡೆ ಕಾಲುವೆ ಯೋಜನೆ

1652 (2212) ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) - ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಬಲದಂಡೆ ಕಾಲುವೆ ಪೂರ್ಣಗೊಳಿಸುವ ವಿಚಾರ ಸರ್ಕಾರಕ್ಕಿದೆಯೇ ;

ಆ) ಈ ಕಾಮಗಾರಿಗಳ ಕೆಲಸ ಯಾವ ಹಂತದಲ್ಲಿದೆ ; ಯೋಜನೆ ಸಂಪೂರ್ಣಗೊಳಿಸಲು ಇನ್ನು ಎಷ್ಟು ಅವಧಿ ಬೇಕಾಗಬಹುದು ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಮಲಪ್ರಭಾ ಬಲದಂಡೆ ಕಾಲುವೆಯ ಒಟ್ಟು ಉದ್ದ 142 ಕಿ.ಮೀ.ಗಳಿದ್ದು, ಕಿ.ಮೀ.124ರವರೆಗೆ ಕೆಲಸಗಳು ಪೂರ್ಣಗೊಂಡಿರುತ್ತದೆ. ಕಿ.ಮೀ.125 ರಿಂದ 131 ರವರೆಗೆ ಕೆಲಸಗಳು ಪ್ರಗತಿಯಲ್ಲಿದೆ.

ಜಲಾಶಯದಲ್ಲಿ ನೀರಿನ ಒಳ ಹರಿವು ಮತ್ತು ಶೇಖರಣೆಯು ಕಡಿಮೆಯಾಗಿರುವುದರಿಂದ ಕಿ.ಮೀ.132 ರಿಂದ 142ರ ವರೆಗೆ ಹಾಗೂ ಅದರಡಿಯಲ್ಲಿ ಬರುವ ಹಂಚಿಕೆ 56(ಬಿ) ಯಿಂದ 60ರ ಕಾಮಗಾರಿಗಳನ್ನು ಮುಂದುವರೆಸುವ ಬಗ್ಗೆ ತಾಂತ್ರಿಕ ವಿಷಯಗಳು ಪರಿಶೀಲನೆಯಲ್ಲಿದೆ.

ಆ) ಮಲಪ್ರಭಾ ಬಲದಂಡೆ ಮುಖ್ಯ ಕಾಲುವೆ ಕಿ.ಮೀ. 124 ರ ವರೆಗೆ ಕಿ.ಮೀ. 121+210ರಲ್ಲಿನ ಹಿರೇಹಳ್ಳ ಎಕ್ವಡೆಕ್ಟ್ ಹೊರತುಪಡಿಸಿ ಪೂರ್ಣಗೊಳಿಸಲಾಗಿದೆ. ಕಿಮೀ 125 ರಿಂದ 131 ರವರೆಗೆ ಕೆಲಸಗಳು ಪ್ರಗತಿಯಲ್ಲಿವೆ. ಮಲ್ಲಪ್ರಭಾ ಬಲದಂಡೆ ಕಾಲುವೆಯಡಿ ಬರುವ 60 ಹಂಚಿಕೆಗಳಲ್ಲಿ ಹಂಚಿಕೆ 1 ರಿಂದ 51 ರವರೆಗಿನ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಹಂಚಿಕೆ 52 ರಿಂದ 56 (ಎ) ವರೆಗಿನ ಕಾಮಗಾರಿಗಳು ಪ್ರಗತಿಯಲ್ಲಿವೆ. ಕಿಮೀ 132 ರಿಂದ 142 ರ ವರೆಗಿನ ಬರುವ 56(ಬಿ) ಯಿಂದ 60ರವರೆಗಿನ ಹಂಚಿಕೆಗಳ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ತಾಂತ್ರಿಕ ವಿಷಯಗಳು ಪರಿಶೀಲನೆಯಲ್ಲಿದೆ. ಕಿ.ಮೀ. 142 ರವರೆಗಿನ ಕಾಮಗಾರಿಗಳನ್ನು ಮಾರ್ಚ್ 2004ರ ಅಂತ್ಯದವರೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.